

# ನಂಬಿಕೆಯ ಬಂಡಿಯ ನೀರ ಮೇಲೂ ಓಡಿಸಬಹುದೇ?

**ವರ್ತಮಾನದ ಸಂಕಟವನ್ನು ನೆನಪುಗಳೊಂದಿಗೆ ಸಮೀಕರಿಸುವ ಪ್ರಯತ್ನ ಕುತೂಹಲಕಾರಿಯಾಗಿದೆ. ಆದರೆ ಆ ಪ್ರಯತ್ನ ಹೋಗಿ ತಲುಪುವ ಬಿಂದು ಅಸೂಕ್ಷ್ಮವೂ ಅಸಹಜವೂ ಆಗಿದೆ.**

■ ಗೌರಿ

ನಮ್ಮ ಬದುಕು ನೂರಾರು, ಸಾವಿರಾರು ನಂಬಿಕೆಗಳಿಂದ ಕಟ್ಟಲ್ಪಟ್ಟಿದೆ. ಒಬ್ಬರ ನಂಬಿಕೆ ಇನ್ನೊಬ್ಬರಿಗೆ ಹಾಸ್ಯಾಸ್ಪದ ಅನಿಸಬಹುದು. ಆದರೆ ಅವರ ಬದುಕಿನಲ್ಲಿ ಅದಕ್ಕೆ ಇರುವ ಸ್ಥಾನ ಮತ್ತು ಆ ನಂಬಿಕೆ ಕೊಡುವ ಚಾಲಕಶಕ್ತಿಯೇ ನಿರಾಶೆಯ ಕಡಲಲ್ಲಿಯೂ ದೋಣಿಯ ಹುಟ್ಟು ಹಾಕುವಂತೆ ನಮ್ಮನ್ನು ಪ್ರೇರೇಪಿಸುವುದು.

‘ಫೆಯ್ತ್’ ಕಿರುಚಿತ್ರವೂ ಒಂದು ನಂಬಿಕೆಯ ಸುತ್ತಲೇ ಹೆಣೆಯಲ್ಪಟ್ಟಿದೆ. ಆದರೆ ಈ ಚಿತ್ರದಲ್ಲಿ ನಂಬಿಕೆ ಬಿಂಬಿತವಾಗಿರುವ ರೀತಿ ಎಂಥದ್ದು? ಅದು ಒಟ್ಟಾರೆ ಚಿತ್ರಕ್ಕೆ ಯಾವ ರೀತಿಯ ಧ್ವನಿಯನ್ನು ಕೊಟ್ಟಿದೆ ಎಂಬುದನ್ನು ಅವಲೋಕಿಸಲು ಕಿರುಚಿತ್ರದ ಕಥೆಯನ್ನು ಸಂಕ್ಷಿಪ್ತವಾಗಿಯಾದರೂ ತಿಳಿದುಕೊಳ್ಳಲೇಬೇಕು.

ಹದಿಹರೆಯದ ಗುಂಗಿನಲ್ಲಿರುವ ಆ ಜೋಡಿ, ಗೆಳತಿಯ ಮನೆಯಲ್ಲಿಯೇ ಉಳಿದುಕೊಳ್ಳುವುದಾಗಿ ಸುಳ್ಳು ಹೇಳಿ ನೈಟ್‌ಔಟ್‌ಗೆ ಹೋಗುತ್ತಾರೆ. ನಗರದ ಆಚೆ ಬರುವ ಅವರು, ಒಂದು ನಿರ್ಜನ ಪ್ರದೇಶದಲ್ಲಿ ಕಾರು ನಿಲ್ಲಿಸಿ ಪಯಣದಲ್ಲಿ ತೊಡಗುತ್ತಾರೆ. ಆಗಲೇ ಯಾರೋ ಬಂದು ಗಾಜು ತಟ್ಟುತ್ತಾರೆ. ಗಾಜು ಇಳಿಸಿದರೆ ಒಬ್ಬ ಗಡ್ಡಧಾರಿ ಯುವಕ. ತಾನು ಪೊಲೀಸ್ ಎಂದವನು ಹೇಳುತ್ತಾನೆ. ಭಯದಲ್ಲಿಯೇ ‘ನಿಮ್ಮ ಪೊಲೀಸ್ ಐಡಿ ತೋರಿಸಿ’ ಎಂದಾಗ ಆ ಯುವಕ ಮತ್ತವನ ಬಳಗದವರು ಬಲವಂತದಿಂದ ಅವರಿಬ್ಬರನ್ನೂ ಸೆಳೆದುಕೊಂಡು ಒಂದು ನಿರ್ಜನ ಪ್ರದೇಶಕ್ಕೆ ಕೊಂಡೊಯ್ಯುತ್ತಾರೆ. ಹುಡುಗ ಹುಡುಗಿ ಇಬ್ಬರ ಕೈಗಳನ್ನೂ ಕಟ್ಟಿ ಕೆಡವಿ, ಹುಡುಗಿಯ ಮೇಲೆ ಅತ್ಯಾಚಾರಕ್ಕೆ ತೊಡಗುತ್ತಾರೆ.

ಇಲ್ಲಿಯವರೆಗೆ ಒಂದು ದಾರುಣ ಘಟನೆಯನ್ನು ಬಿಗಿಯಾದ ಮತ್ತು ವಾಸ್ತವಿಕ ತಳಹದಿಯ ಮೇಲೆ ಕಟ್ಟುವ ನಿರ್ದೇಶಕರು ಇಲ್ಲಿಂದ ಮತ್ತೊಂದು ದಾರಿಗೆ ಜಿಗಿಯುತ್ತಾರೆ. ಆ ಹುಡುಗ ತನ್ನ ಬಾಲ್ಯದಿಂದ ಇಲ್ಲಿಯವರೆಗೆ ತಾನು ಅನುಭವಿಸಿದ ಅವಮಾನ, ನೋವಿನ ನೆನಪುಗಳನ್ನು ಈ ಕ್ಷಣದ ನೋವಿನೊಟ್ಟಿಗೆ ನೆನಪಿಸಿಕೊಳ್ಳಲು ಆರಂಭಿಸುತ್ತಾನೆ.

**ಹೆಸರು:** ಹರಿ ಖಾಲ್ಸಾ, ಕಹಾನಿಕರ್ ಸರೋಮಿ
**ನಿರ್ಮಾಣ:** ಪಾರ್ವತಿ ಮೀನಾ, ರಾಜನ್ ಎಸ್. ಮೀನಾ
**ಛಾಯಾಗ್ರಹಣ:** ವೇದಪ್ರಕಾಶ
**ಸಂಕಲನ:** ಗುಂಜನ್ ಅಮೋಲ್
**ಧ್ವನಿ ವಿನ್ಯಾಸ:** ರಾಮ್ ಸಿಂಗ್
**ತಾರಾಗಣ:** ರಾಜಾನ್ಸ್ ಸಿಂಗ್, ಚಾವಿ ತ್ಯಾಗಿ, ನಮಿತಾ, ರಾಧವ್, ವಿಭು

‘ಈ ನೋವನ್ನು, ಈ ಅವಮಾನವನ್ನು, ಆತಂಕವನ್ನು ನಾನು ಅನುಭವಿಸುತ್ತಿರುವುದು ಇದೇ ಮೊದಲಲ್ಲ. ಈ ಹಿಂದೆಯೂ ಅನುಭವಿಸಿದ್ದೇನೆ’ ಎಂದು ಅಂದುಕೊಳ್ಳುವ ಅವನ ಮನಸಲ್ಲಿ ಅಂಥ ಹಲವು ಘಟನೆಗಳು ಸರಿದುಹೋಗಲಾರಂಭಿಸುತ್ತವೆ. ಹೀಗೆ ನೋವನ್ನು ಎಲ್ಲ ಹಿಂದಿನ ನೋವುಗಳೊಟ್ಟಿಗೆ ಸಮೀಕರಿಸುವ ಪ್ರಯತ್ನವೇನೋ ಕುತೂಹಲಕಾರಿಯಾಗಿದೆ. ಆದರೆ ಈ ಪ್ರಯತ್ನ ಹೋಗಿ ತಲುಪುವ ಬಿಂದು ಮಾತ್ರ ಅಸೂಕ್ಷ್ಮವೂ ಅಸಹಜವೂ ಆಗಿದೆ.

‘ಹಿಂದೆ ಇಂಥ ಹಲವು ಸಂಕಟಗಳು ಬಂದಾಗಲೆಲ್ಲ ನಾನು ನನ್ನ ಅಜ್ಜಿ ಹೇಳಿಕೊಟ್ಟ ಮಂತ್ರ ಪಠಿಸುತ್ತಿದ್ದೆ. ಆಗ ಯಾರೋ ಒಬ್ಬರು ಬಂದು ತನ್ನನ್ನು ಕಾಪಾಡುತ್ತಿದ್ದರು’ ಎಂದು ನೆನಪಿಸಿಕೊಳ್ಳುವ ಹುಡುಗ ಮಂತ್ರ ಪಠಿಸಲು ತೊಡಗುತ್ತಾನೆ. ಅದು ಮುಗಿಯುವಷ್ಟರಲ್ಲಿ ಪೊಲೀಸ್ ವಾಹನದ ಸೈರನ್ ಕೇಳಿಸುತ್ತದೆ. ಅತ್ಯಾಚಾರಕ್ಕೆ ತೊಡಗಿದ್ದ ಹುಡುಗರು ಕಂಗಾಲಾಗುತ್ತಾರೆ.

ಇಲ್ಲಿಗೆ ಕಿರುಚಿತ್ರ ಮುಗಿಯುತ್ತದೆ. ತಾಂತ್ರಿಕವಾಗಿ ನಿರ್ದೇಶಕರಿಗೆ ಕೌಶಲ ಸಿದ್ಧಿಸಿರುವುದು ಕಾಣಿಸುತ್ತದೆ. ಆದರೆ ತಾಂತ್ರಿಕತೆಯಷ್ಟೇ ಸಿನಿಮಾ ಅಲ್ಲವಲ್ಲ. ಇಲ್ಲಿ ನಿರ್ದೇಶಕರು ನಂಬಿಕೆಯ ಶಕ್ತಿಯ ಕುರಿತು ಹೇಳಲು ಆಯ್ದುಕೊಂಡಿರುವ ಸನ್ನಿವೇಶವೇ ಅವರ ಅಸೂಕ್ಷ್ಮ ಮನಸ್ಥಿತಿಯನ್ನು ಕಾಣಿಸುತ್ತದೆ.

‘ಅತ್ಯಾಚಾರ ಮಾಡುವಾಗ ದೇವರನ್ನು ಪ್ರಾರ್ಥಿಸಿ. ಅವನು ನಿಮ್ಮನ್ನು ಕಾಪಾಡುತ್ತಾನೆ’ ಎಂದು ಈ ಕಿರುಚಿತ್ರ ಹೇಳುತ್ತಿದೆಯೇ? ಹೌದಾಗಿದ್ದರೆ ಅತ್ಯಾಚಾರ ಮಾಡುವ ಮನಸ್ಥಿತಿಗೂ ಈ ಮನಸ್ಥಿತಿಗೂ ವ್ಯತ್ಯಾಸವಿದೆಯೇ? ತನ್ನ ಹಿಂದಿನ ನೆನಪುಗಳಿಂದ ಆ ಹುಡುಗ ಈಗಿನ ಸಂಕಷ್ಟದಿಂದ ಪಾರಾಗುವ ಪ್ರಯತ್ನಕ್ಕೆ ಶಕ್ತಿಯನ್ನು ಒಗ್ಗೂಡಿಸಿಕೊಳ್ಳಲು ಸಾಧ್ಯವಾಗಿದ್ದರೆ ಆಗ ಕಿರುಚಿತ್ರ ಬೇರೆಯದೇ ಬೆಳಕಲ್ಲಿ ಹೊಳೆಯಬಹುದಿತ್ತು. ಆದರಿಲ್ಲಿ ಅವನು ಕೈ ಮುಗಿದು ಪ್ರಾರ್ಥಿಸುವುದು, ಮತ್ತು ಅದಕ್ಕೆ ತಕ್ಕ ಹಾಗೆ ಪೊಲೀಸರು ಅಲ್ಲಿಗೆ ಬರುವುದು ಕಿರುಚಿತ್ರಕ್ಕೆ ಅವಾಸ್ತವಿಕ ಧ್ವನಿಯನ್ನು ಕೊಟ್ಟಿದೆ. ಹಾಗಾಗಿ ‘ಫೆಯ್ತ್’ ಎಂಬ ಹೆಸರಿನ ಈ ಕಿರುಚಿತ್ರ ಕಾಣಿಸುವುದು ಮಾತ್ರ ಹೊಸಕಾಲದ ‘ಬ್ಯಾಡ್‌ಫೆಯ್ತ್’ನ ಮಾದರಿಯೊಂದನ್ನು.

ಈ ಕಿರುಚಿತ್ರ ವೀಕ್ಷಣೆಗೆ bit.ly/2SWAaC2 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.